## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎ. ಲಾಲಾ ನಾಯಕ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು ಹಿರೇಕೆರೂರು ಇವರ ವಿರುದ್ಧ ಶಿಸ್ತು ಕ್ರಮ

ಓದಲಾಗಿದೆ:-

[1] ಸರ್ಕಾರದ ಆದೇಶ ಸಂಖ್ಯೆ: ಕೃತೋಇ 76 ಕೃಪವಿ 2009, ದಿನಾಂಕ: 16-09-2009

[2] ಸರ್ಕಾರದ ಆದೇಶ ಸಂಖ್ಯೆ: ಕೃತೋಇ 76 ಕೃಪವಿ 2009, ದಿನಾಂಕ:11-01-2010.

(3) ಆಯುಕ್ತರು, ಕೃಷಿ ಇಲಾಖೆ, ಇವರ ದಿನಾಂಕ:10-04-2013ಕ್ಕೆ ಕೊನೆಗೊಂಡ ಪತ್ರ ಸಂ.ಸಿಬ್ಬಂದಿ-1/ವಿಚಾರಣೆ-6/7/2009-10.

ಪ್ರಸ್ತಾವನೆ:-

ಮೇಲೆ ಕ್ರ.ಸಂ.[1]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಶ್ರೀ ಎ. ಲಾಲಾ ನಾಯಕ, ಸಹಾಯಕ ಕೃಷಿ ನಿರ್ದೇಶಕರು, ಇವರು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಮುಂಗಾರು ಹಂಗಾಮಿನಲ್ಲಿ ರೈತರಿಗೆ ನೀಡುವ ಸಹಾಯಧನವನ್ನು ದುರುಪಯೋಗಪಡಿಸಿಕೊಂಡು, ಬಿತ್ತನೆ ಬೀಜದ ವಿತರಣೆಯಲ್ಲಿ ನಿಯಮಗಳನ್ನು ಪಾಲಿಸದೇ ಅವ್ಯವಹಾರ ಎಸಗಿರುತ್ತಾರೆಂದು, ಮತ್ತು ಸದರಿ ಅಧಿಕಾರಿಯವರು ತಾಲ್ಲೂಕಿಗೆ ವಿತರಣೆಯಾದ ಸಬ್ಸಿಡಿ ಗೋವಿನ ಜೋಳ, ಜಿಪ್ಸಮ್ ಹಾಗೂ ಇತರೆ ಕೃಷಿ ಪರಿಕರಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬ, ಅಪಾದನೆಗೆ ಸಂಬಂಧಿಸಿದಂತೆ ಅವರ ಮೇಲಿನ ಶಿಸ್ತು ಕ್ರಮ ಬಾಕಿಯಿರಿಸಿ, ಅವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿತ್ತು.

ಮೇಲೆ ಕ್ರ.ಸಂ.[2]ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಸದರಿಯವರ ಅಮಾನತ್ತು ಆದೇಶವನ್ನು ಪುನರ್ ಪರಿಶೀಲಿಸಿ ಸದರಿಯವರ ಅಮಾನತ್ತು ಆದೇಶವನ್ನು ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ತೆರವುಗೊಳಿಸಲಾಗಿತ್ತು ಮತ್ತು ಸದರಿಯವರಿಗೆ ಸಹಾಯಕ ಕೃಷಿ ನಿರ್ದೇಶಕರು [ವಿಷಯ ತಜ್ಞ] ಜಂಟಿ ಕೃಷಿ ನಿರ್ದೇಶಕರ ಕಚೇರಿ, ಕೊಪ್ಪಳ, ಇಲ್ಲಿ ಖಾಲಿ ಇರುವ ಹುದ್ದೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಲಾಗಿತ್ತು. ಶ್ರೀ ಎ. ಲಾಲಾ ನಾಯಕ, ಸಹಾಯಕ ಕೃಷಿ ನಿರ್ದೇಶಕರವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅವರನ್ನು ಶಿಸ್ತು ಕ್ರಮಕ್ಕೆ ಗುರಿಪಡಿಸುವ ನಿಟ್ಟಿನಲ್ಲಿ ಪರಿಶೀಲಿಸಿ, ಪ್ರಸ್ತಾವನೆ ಕಳುಹಿಸುವಂತೆ ದಿನಾಂಕ:20-01-2010ರ ಪತ್ರದಲ್ಲಿ ಕೃಷಿಆಯುಕ್ತರನ್ನು ಕೋರಲಾಗಿದ್ದು, ಕೃಷಿ ಆಯುಕ್ತರು, ಈ ಪ್ರಕರಣದಲ್ಲಿ ಜಂಟಿ ಕೃಷಿ ನಿರ್ದೇಶಕರು, ಹಾವೇರಿ ಇವರಿಂದ ತನಿಖೆ ನಡೆಸಿ, ಅವರಿಂದ ತನಿಖಾ ವರದಿ ಪಡೆದು ಮೇಲೆ ಓದಲಾದ ಉಲ್ಲೇಖ(3)ರ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಶ್ರೀ ಎ. ಲಾಲಾ ನಾಯಕ, ಸಹಾಯಕ ಕೃಷಿ ನಿರ್ದೇಶಕರುರವರು ರೈತರ ವಂತಿಕೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಅವರ ಮೇಲೆ ಮಾಡಿರುವ ಆರೋಪಗಳು ಸಾಬೀತಾಗಿರುವುದಿಲ್ಲವಾದುದರಿಂದ ಅವರ ಮೇಲಿನ ಈ ಪ್ರಕರಣವನ್ನು ಕೈಬಿಡಬಹುದಾಗಿದೆ ಎಂಬುದಾಗಿ

ಅಭಿಪ್ರಾಯ ನೀಡಿ, ಈ ಪ್ರಕರಣದಲ್ಲಿನ ಅವರ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸುವಂತೆ ಸೂಕ್ತ ಕ್ರಮ ವಹಿಸುವಂತೆ ಕೋರಿರುತ್ತಾರೆ.

ಕೃಷಿ ಆಯುಕ್ತರ ಮೇಲ್ಕಂಡ ವರದಿಯನ್ನು ಪರಿಶೀಲಿಸಿದ ಸರ್ಕಾರ, ಸದರಿ ವರದಿಯನ್ನು ಒಪ್ಪಿ ಅವರ ಮೇಲೆ ಉದ್ದೇಶಿಸಿದ ಶಿಸ್ತು ಕ್ರಮದಿಂದ ಕೈಬಿಟ್ಟು, ಈ ಪ್ರಕರಣದಲ್ಲಿನ ಅವರ ಅಮಾನತ್ತಿನ ಅವಧಿಯನ್ನು ಸಕ್ರಮಗೊಳಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 76 ಕೃಪವಿ 2009**
**ಬೆಂಗಳೂರು, ದಿನಾಂಕ:28ನೇ ಆಗಸ್ಟ್ 2013.**

ಪ್ರಸ್ತಾವನೆಯಲ್ಲಿ ವಿವರಸಿರುವ ಕಾರಣಗಳಿಂದಾಗಿ, ಶ್ರೀ ಎ. ಲಾಲಾ ನಾಯಕ, ಸಹಾಯಕ ಕೃಷಿ ನಿರ್ದೇಶಕರು, ಇವರು ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದಾಗ ರೈತರ ವಂತಿಕೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆರೋಪಗಳಿಗೆ ಸಂಬಂಧಿಸಿದಂತೆ ಕೃಷಿ ಆಯುಕ್ತರು, ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ, ಸದರಿಯವರನ್ನು ಆರೋಪಗಳಿಂದ ಮುಕ್ತಗೊಳಿಸಿ, ಈ ಪ್ರಕರಣದಲ್ಲಿ ಅವರನ್ನು ಅಮಾನತ್ತಿನಲ್ಲಿರಿಸಿದ್ದ ಅವಧಿ ದಿನಾಂಕ:16-09-2009 ರಿಂದ 11-01-2010ನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು( ಲೆಕ್ಕ ತಪಾಸಣೆ/ಲೆಕ್ಕ ಪತ್ರ ಜಿಇ-05) ಕರ್ನಾಟಕ, ಬೆಂಗಳೂರು.
2] ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
3] ಜಂಟಿ ಕೃಷಿ ನಿರ್ದೇಶಕರು, ಹಾವೇರಿ ಜಿಲ್ಲೆ ಹಾವೇರಿ ಇವರಿಗೆ,
4] ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಕೊಪ್ಪಳ ಜಿಲ್ಲೆ
5] ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ ಬೆಂಗಳೂರು
6] ಸಂಬಂಧಿಸಿದ ಅಧಿಕಾರಿಯವರಿಗೆ [ಕೃಷಿ ಆಯುಕ್ತರ ಮೂಲಕ];
7] ಮಾನ್ಯ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
8] ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.